ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 6, January-February 2024, Pp. 49-56
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ತ್ರಿಕೂಟಚಲ ಮಲ್ಲಿಕಾರ್ಜುನ ಸ್ವಾಮಿ ದೇವಾಲಯ

**ಡಾ. ಅನಿತ ಟಿ**

ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ (ಬಿ.ಎ.ಆನರ್ಸ್), ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

**Abstract:**

*ಕ್ರಿ.ಶ.11ನೇ ಶತಮಾನದಲ್ಲಿ ಅಸ್ತಿತ್ವಕ್ಕೆ ಬಂದ ಹೊಯ್ಸಳರು ಮೂರುನೂರು ವರ್ಷಗಳ ಕಾಲ ಕರ್ನಾಟಕವನ್ನು ಆಳಿ ಕಲೆ ಮತ್ತು ವಾಸ್ತುಶಿಲ್ಪಕ್ಕೆ ಶ್ರೇಷ್ಠ ಕೊಡುಗೆಯನ್ನು ನೀಡಿದ್ದಾರೆ. ಹೊಯ್ಸಳರು ವಾಸ್ತುಶಿಲ್ಪ ಕ್ಷೇತ್ರದಲ್ಲಿ ಅಪೂರ್ವ ಸಾಧನೆ ಮಾಡಿ ವಾಸ್ತುಶಿಲ್ಪದಲ್ಲಿ ಮೊಘಲರಂತೆ ಸುವರ್ಣಯುಗ ಸೃಷ್ಟಿಸಿದರು. ಇವರು ತಮ್ಮದೇ ಆದ ಹೊಯ್ಸಳ ಶೈಲಿಯನ್ನು ಪರಿಚಯಿಸುವ ಮೂಲಕ ನೂರಾರು ದೇವಾಲಯಗಳ ನಿರ್ಮಾಣಕ್ಕೆ ಕಾರಣರಾಗಿದ್ದಾರೆ. 13ನೇ ಶತಮಾನದಲ್ಲಿ ಹೂಯ್ಸಳ ಅರಸ ಬಿಟ್ಟಿದೇವನ ಕಾಲವನ್ನು ಹೂಯ್ಸಳ ಕಾಲದ ವಾಸ್ತುಶಿಲ್ಪದ ಸುವರ್ಣಯುಗ ಎನ್ನಲಾಗಿದೆ. ಇವರ ಸಾಮ್ರಾಜ್ಯದ ವ್ಯಾಪ್ತಿಯಲ್ಲಿ ಸುಮಾರು 1521 ದೇವಾಲಯಗಳನ್ನು ನಿರ್ಮಿಸಿದ್ದಾರೆ. ಪ್ರಸ್ತುತ ಲೇಖನದಲ್ಲಿ ತ್ರಿಕೂಟಚಲ ಮಲ್ಲಿಕಾರ್ಜುನ ಸ್ವಾಮಿ ದೇವಾಲಯವನ್ನು ಕುರಿತು ಚರ್ಚಿಸಲಾಗಿದೆ.*

**Keywords:** *ಕರ್ನಾಟಕ ಇತಿಹಾಸ, ಹೊಯ್ಸಳರು, ತ್ರಿಕೂಟಚಲ ಮಲ್ಲಿಕಾರ್ಜುನ ಸ್ವಾಮಿ ದೇವಾಲಯ, ಕಲೆ ಮತ್ತು ವಾಸ್ತುಶಿಲ್ಪ.*

## ಪೀಠಿಕೆ

ಭಾರತದ ವಾಸ್ತುಶಿಲ್ಪವೇ ವೈಜ್ಞಾನಿಕ ಮತ್ತು ಸಾಂಸ್ಕೃತಿಕ ದೃಷ್ಟಿಯಿಂದ ಅದ್ಭುತ ಸೃಷ್ಟಿಸಿದೆ. ಭಾರತೀಯ ವಾಸ್ತುಶಿಲ್ಪ ಶೈಲಿಯಲ್ಲಿಯೇ ಇವರ ಶೈಲಿ ವಿಶಿಷ್ಟವಾಗಿದೆ. ಇವರ ಕಾಲದಲ್ಲಿ ನಿರ್ಮಾಣಗೊಂಡ ಕಟ್ಟಡಗಳ ಶೈಲಿಯಲ್ಲಿ ತಮ್ಮದೇ ಆದ ವಿನ್ಯಾಸ ಮತ್ತು ತಂತ್ರಗಾರಿಕೆಯನ್ನು ತೋರಿಸಿದ್ದಾರೆ. ಕಲ್ಲಿನ ಆಯ್ಕೆ, ಕೆತ್ತನೆಯ ಸೂಕ್ಷ್ಮತೆಯಲ್ಲಿ ತಮ್ಮದೇ ಆದ ಪ್ರತ್ಯೇಕ ಹೆಸರನ್ನು ಪಡೆದುಕೊಂಡಿದ್ದಾರೆ. ಇವರ ಸಾಮ್ರಾಜ್ಯದ ಗಡಿ ವ್ಯಾಪ್ತಿಯಲ್ಲಿ ಸುಮಾರು 1521 ದೇವಾಲಯಗಳನ್ನು ನಿರ್ಮಿಸಿದ್ದು, ಇವುಗಳಲ್ಲಿ 965 ಶಿವನಿಗಾಗಿ ಮತ್ತು 293 ವಿಷ್ಣುವಿಗಾಗಿ ನಿರ್ಮಿಸಿದ್ದಾರೆ ಹಾಗೂ 173 ಜೈನ ಬಸದಿಗಳು 12 ಸೂರ್ಯದೇವರಿಗಾಗಿ 11 ಹರಿಹರನಿಗಾಗಿ ಮತ್ತು ಬ್ರಹ್ಮನಿಗಾಗಿ 5 ದೇವಾಲಗಳನ್ನು ನಿರ್ಮಿಸಿರುವುದು ಇವರ ಧರ್ಮಸಹಿಷ್ಣತೆಗೆ ಹಿಡಿದ ಕೈಗನ್ನಡಿಯಾಗಿದೆ.[1]

ಇವರ ಕಾಲದ ದೇವಾಲಯಗಳನ್ನು ಗರ್ಭಗುಡಿಗಳ ಸಂಖ್ಯೆಯನ್ನು ಆಧರಿಸಿ ಅಡಿಯಿಂದ ಮುಡಿಯವರೆಗೂ ಪ್ರತ್ಯೇಕ ಷಡ್ವರ್ಗದ ನಿರ್ಮಾಣಕ್ಕೆ ಸಂಬಂಧಿಸಿದಂತೆ ಏಕಕೂಟ, ದ್ವಿಕೂಟ, ತ್ರಿಕೂಟ, ಚತುಷ್ಕೂಟ ಮತ್ತು ಪಂಚಕೂಟಗಳೆಂದು ವಿಭಾಗಿಸಿರುವುದು ವಿಶೇಷವಾಗಿ ಆಕರ್ಷಿಸುತ್ತವೆ. ಏಕಕೂಟದಲ್ಲಿ ಒಂದು ದೇವತಾ ಮೂರ್ತಿಗಾಗಿ

[1] ಯೋಜನಾ (2022, ಡಿಸೆಂಬರ್). ಪ್ರಕಾಶನ ವಿಭಾಗ, ಸಮಾಚಾರ ಮತ್ತು ಪ್ರಸಾರ ಸಚಿವಾಲಯ, ಭಾರತ ಸರ್ಕಾರ.

**Please cite this article as:** ಅನಿತ ಟಿ. (2024). ತ್ರಿಕೂಟಚಲ ಮಲ್ಲಿಕಾರ್ಜುನ ಸ್ವಾಮಿ ದೇವಾಲಯ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 2(6), 49–56.

ಒಂದು ಗರ್ಭಗೃಹ, ಸುಖನಾಸಿ, ನವರಂಗ ಮತ್ತು ಒಂದು ಶಿಖರವಿರುತ್ತದೆ. ದ್ವಿಕೂಟ, ತ್ರಿಕೂಟ, ಚತುಷ್ಕೂಟ ಮತ್ತು ಪಂಚಕೂಟಗಳಿಗೆ ಪ್ರತ್ಯೇಕ ಗರ್ಭಗೃಹ, ಸುಖನಾಸಿಗಳಿದ್ದರೂ ನವರಂಗ, ಮುಖಮಂಟಪ ಮುಂತಾದ ಭಾಗಗಳು ಒಂದೇ ಆಗಿದ್ದು ಶಿಖರಗಳು ಮಾತ್ರ ಗರ್ಭಗೃಹದ ಸಂಖ್ಯೆಗೆ ಅನುಗುಣವಾಗಿರುತ್ತದೆ. ಇಂತಹ ಕೂಟಗಳ ವ್ಯವಸ್ಥೆಯನ್ನು ಮೂರು ಶಿಖರ ಅಥವಾ ತ್ರಿಕೂಟವನ್ನು ಕಲ್ಯಾಣ ಚಾಲುಕ್ಯರ ದೇಗುಲಗಳಲ್ಲಿ ಕಂಡರೂ ಸಹ ನಾಲ್ಕು ಮತ್ತು ಐದು ಕೂಟಗಳನ್ನು ಕಾಣುವುದಿಲ್ಲ. ಪಂಚಕೂಟಗಳ ದೇವಾಲಯಗಳಿಗೆ ಉದಾಹರಣೆ ನೋಡುವುದಾದರೆ, ಏಕಕೂಟ–ಬೇಲೂರು, ದ್ವಿಕೂಟ–ಹಳೇಬೀಡು, ತ್ರಿಕೂಟ–ಸೋಮನಾಥಪುರ, ಚತುಷ್ಕೂಟ–ದೊಡ್ಡಗದ್ದವಳ್ಳಿ ಮತ್ತು ಪಂಚಕೂಟಕ್ಕೆ–ಗೋವಿಂದನಗಳ್ಳಿಗಳಲ್ಲಿ ಕಾಣಬಹುದು.

ಹೊಯ್ಸಳ ದೇವಾಲಯಗಳೆಂದರೆ ಅದು ಕಲ್ಲಿನ ಅದ್ಭುತ ದೃಶ್ಯಕಾವ್ಯ, ವಿಜ್ಞಾನದ ಸಾಧನೆಯ ಪ್ರತೀಕ, ತಂತ್ರಜ್ಞಾನದ ಉತ್ತಮ ಉದಾಹರಣೆ. ಕಲೆ ಮತ್ತು ವಾಸ್ತುಶಿಲ್ಪದ ಉತ್ತುಂಗ, ಭಾರತೀಯ ಮಹಾಕಾವ್ಯ ಮತ್ತು ಪುರಾಣಗಳ ಮೂರ್ತರೂಪ, ಆಗಮಗ್ರಂಥಗಳ ಪ್ರತೀಕ, ಗಣಿತದ ಮೇರು ಸಾಧನೆಗೆ ಸಾಕ್ಷಿ ಹಾಗೂ ಸಮಸ್ತ ಭಾರತೀಯ ಸಮಾಜದ ಸಂಸ್ಕೃತಿಯ ಪ್ರತಿರೂಪವಾಗಿ ನಮಗೆ ಗೋಚರವಾಗುತ್ತದೆ. ಹೊಯ್ಸಳರ ದೇವಾಲಯದ ನಿರ್ಮಾಣದ ಹಂತದಲ್ಲಿನ ಗಮನಾರ್ಹ ಸಂಗತಿಗಳೆಂದರೆ ದೇವಾಲಯಗಳ ನಿರ್ಮಾಣಕ್ಕೆ ಮಾಡುತ್ತಿದ್ದ ಸ್ಥಳಗಳ ಆಯ್ಕೆ, ಕಲ್ಲಿನ ಆಯ್ಕೆ, ತಾಂತ್ರಿಕತೆ, ಕಂಬಗಳ ವಿನ್ಯಾಸ, ಸೂಕ್ಷ್ಮ ಕೆತ್ತನೆಗಳು, ಪ್ರತಿಮೆಗಳು ಹೀಗೆ ವಾಸ್ತುಶೈಲಿಯ ಸೊಬಗಿನ ವಿವರಣೆಯು ವಿಸ್ತಾರವಾಗುತ್ತಾ ಹೋಗುತ್ತದೆ. ಮೇಲಿನ ಪಂಚಕೂಟಗಳನ್ನು ಒಳಗೊಂಡಂತೆ ಇತರೆ ಕೆಲವೊಂದು ದೇವಾಲಯಗಳನ್ನು ಹೆಸರಿಸುವುದಾದರೆ ತಲಕಾಡಿನ ಕೀರ್ತಿನಾರಾಯಣ, ಕೆರೆತೊಣ್ಣೂರಿನ ನಂಬಿನಾರಾಯಣ, ಮೇಲುಕೋಟೆಯ ಚೆಲುವ ನಾರಾಯಣ, ಅರಸೀಕೆರೆಯ ಬಲ್ಲಾಳೇಶ್ವರ, ಅಮೃತಪುರದ ಅಮೃತಪುರೇಶ್ವರ ದೇವಾಲಯ, ತೊಂಡನೂರಿನ ವೀರನಾರಾಯಣ, ಹುಲಿಯೂರಿನ ರಂಗನಾಥ ಮತ್ತು ಮಲ್ಲಿಕಾರ್ಜುನ ದೇವಾಲಯ, ಶಿವಗಂಗೆಯ ಗಂಗಾಧರೇಶ್ವರ ದೇವಾಲಯ, ಬೆಳಗಾವಿಯ ಕೇಧಾರೇಶ್ವ ಮತ್ತು ತ್ರಿಪುರಾಂತ ದೇವಾಲಯಗಳು, ಗದಗ ಮತ್ತು ಬಂಕಾಪುರಗಳಲ್ಲಿ ವೀರ ನಾರಾಯಣ ದೇವಾಲಯ, ಮಾರಲೆಯ ಸಿದ್ದೇಶ್ವರ ದೇವಾಲಯ ಮತ್ತು ಕೇಶವ ಗುಡಿ ಮತ್ತು ಬಸರಾಳುವಿನಲ್ಲಿ ಮಲ್ಲಿಕಾರ್ಜುನ ಸ್ವಾಮಿ ಹೀಗೆ ಹಲವಾರು ಪ್ರಮುಖ ದೇವಾಲಯಗಳನ್ನು ಗುರುತಿಸಬಹುದು.

ಈ ಮೇಲಿನ ಕೆಲವು ದೇವಾಲಯಗಳನ್ನು ಸಂದರ್ಶಿಸಿದ ನಂತರದಲ್ಲಿ ನಮಗೆ ತಿಳಿಯುವ ಹೊಯ್ಸಳರ ಕಲೆ ಮತ್ತು ವಾಸ್ತುಶಿಲ್ಪದ ಪ್ರಮುಖ ಅಂಶಗಳನ್ನು ಅಥವಾ ಇವರ ಶೈಲಿಯ ಕೆಲವೊಂದು ಲಕ್ಷಣಗಳನ್ನು ಗುರುತಿಸುವುದಾದರೆ,

- ಸಾಮಾನ್ಯವಾಗಿ ನಕ್ಷತ್ರಾಕಾರದ ತಳನಕ್ಷೆಯಿದ್ದು, ಅಧಿಷ್ಠಾನದಿಂದ ಶಿಖರದವರೆಗೂ ಅದೇ ಕೋನದಲ್ಲಿ ಮುಂದುವರೆದು ನಕ್ಷತ್ರಾಕೃತಿಯನ್ನು ಹೊಂದಿರುತ್ತವೆ.
- ದೇವಾಲಯವನ್ನು ಎತ್ತರದವಾದ ಜಗತಿಯ ಮೇಲೆ ಸ್ಥಾಪಿಸಲಾಗಿದ್ದು ಜಗತಿಯು ಪ್ರದಕ್ಷಿಣಾ ಪಥದ ಮೂಲಕ ಸುತ್ತಲಿನ ದೇವಾಲಯದ ಶಿಲ್ಪಗಳನ್ನು ನೋಡಬಹುದು.
- ಅಧಿಷ್ಠಾನಗಳು ಆನೆಯಸಾಲು, ಸಿಂಹದ ಸಾಲು, ಕುದುರೆ ಸಾಲು, ಲತೆ ಬಳ್ಳಿ ಸಾಲು, ಯಾಳಿಯ ಸಾಲು, ಮಕರ ಸಾಲು, ದಶಾವತಾರ ಸಾಲು, ಹಂಸದ ಸಾಲು, ದೇವತಾ ಪ್ರತಿಮೆಗಳ ಸಾಲು ಹೀಗೆ ಅನೇಕ ಬಗೆಯ ವಿವಿಧ ಶಿಲ್ಪ ಕಲಾಕೃತಿಗಳು ದೇವಾಲಯದ ಹೊರ ಭಿತ್ತಿಯ ಸೌಂದರ್ಯವನ್ನು

ಇಮ್ಮಡಿಗೊಳಿಸಿವೆ. ಕೆಲವು ದೇವಾಲಯಗಳಲ್ಲಿ ಹಲವು ವ್ಯತ್ಯಾಸಗಳನ್ನು ಸಹ ಗಮನಿಸಬಹುದು.

- ದೇವಾಲಯದ ಭಿತ್ತಿ, ಕೋಷ್ಠಗಳು, ವಿಮಾನಗಳಲ್ಲಿ ಅಪರೂಪದ ದೇವತಾ ವಿಗ್ರಹಗಳನ್ನು, ಕಪೋತದ ಕೆಳಭಾಗದಲ್ಲಿ ವಿಶಿಷ್ಟವಾದ ಮದನಿಕೆಯ ವಿಗ್ರಹಗಳನ್ನು ಕಾಣುತ್ತೇವೆ.
- ದೇವಾಲಯಗಳು ಜಗತಿ, ಅಧಿಷ್ಠಾನ, ಭಿತ್ತಿ, ಕಪೋತ, ಹಾರ, ಗ್ರೀವ ಮತ್ತು ಶಿಖರಗಳನ್ನು ಏರು ನಕ್ಷೆಯಲ್ಲಿ ನಿರ್ಮಿಸಿದ್ದಾರೆ.
- ತಳನಕ್ಷೆಯಲ್ಲಿ ಗರ್ಭಗೃಹ, ಸುಖನಾಸಿ, ನವರಂಗ, ಸಭಾಮಂಟಪ, ನಂದಿಮಂಟಪ ಮತ್ತು ಪುಷ್ಕರಣಿಗಳನ್ನು ಹೊಂದಿರುತ್ತವೆ ಕೆಲವು ದೇವಾಲಯಗಳಲ್ಲಿ ಪುಷ್ಕರಣಿಗಳು ಕಂಡುಬರುವುದಿಲ್ಲ.
- ದೇವಾಲಯದ ಅಧಿಷ್ಠಾನ, ಭಿತ್ತಿ ಮತ್ತು ಶಿಖರಭಾಗಗಳು ಮೂರು ಲೋಕಗಳನ್ನು ಪ್ರತಿನಿಧಿಸುವಂತಿರುತ್ತವೆ.
- ಕಲೆಯು ಅತ್ಯಂತ ಸೂಕ್ಷ್ಮ ಕೆತ್ತನೆ ಹೊಂದಿದ್ದು ಹೊಯ್ಸಳ ಶೈಲಿಯ ಶಿಲ್ಪಿಗಳಲ್ಲಿ ಭುವನೇಶ್ವರಿಗಳು ಮತ್ತು ಕಂಬಗಳ ಸೂಕ್ಷ್ಮ ಕೆತ್ತನೆ ಆಕರ್ಷಿಸುತ್ತವೆ.
- ಇವರ ಕಲಾ ಶೈಲಿಯಲ್ಲಿ ಸಮಕಾಲೀನ ಜಗತ್ತಿನ ಅನೇಕ ಉಡುಗೆ, ತೊಡುಗೆ, ವಾದ್ಯಗಳು, ಆಯುಧಗಳ ಅಂದಾಜು ನಮಗೆ ಸಿಗುತ್ತದೆ.
- ಹೊಯ್ಸಳರ ಮದನಿಕಾ ವಿಗ್ರಹಗಳು ಮತ್ತು ಸಾಲಾಗಿ ಕೆತ್ತನೆ ಮಾಡಿರುವ ಕಲಾಕೃತಿಗಳು ಅಪರೂಪವೆನಿಸುವಂತ ಶಿಲ್ಪಗಳಾಗಿದ್ದು ವೀಕ್ಷಕರನ್ನು ತನ್ನತ್ತ ಹಿಡಿದಿಡುವ ಮೋಹಕ ಭಾವನೆಯ ಕಲಾ ಸೊಬಗನ್ನು ಸೂರೆಗೊಳಿಸುವಂತ ಶಕ್ತಿಯನ್ನು ಪಡೆದಿವೆ.

ಹೀಗೆ ಹೊಯ್ಸಳರ ಕಲಾಶೈಲಿಯ ವಿವಿಧ ಲಕ್ಷಣಗಳನ್ನು ಗುರುತಿಸಬಹುದು ನಾಡಿನಾದ್ಯಂತ ಜೀವಂತವಾಗಿರುವ ಅನೇಕ ದೇವಾಲಯಗಳಲ್ಲಿ ತ್ರಿಕೂಟಚಲ ದೇವಾಲಯದ ಪರಿಚಯವನ್ನು ಮಾಡಿಸುವುದು ನನ್ನ ಲೇಖನದ ಉದ್ದೇಶವಾಗಿದೆ.

ಬಸರಾಳು ಮಲ್ಲಿಕಾರ್ಜುನ ಸ್ವಾಮಿ ದೇವಾಲಯ ಇದು ತ್ರಿಕೂಟಚಲ ದೇವಾಲಯವಾಗಿದ್ದು ಹೊಯ್ಸಳರ ಕಲಾ ಶೈಲಿಗೆ ಉತ್ತಮ ನಿದರ್ಶನವಾಗಿದೆ. ಇದು ಮಂಡ್ಯ ಜಿಲ್ಲೆ ನಾಗಮಂಗಲ ತಾಲೂಕಿನಲ್ಲಿದೆ. ಕ್ರಿ.ಶ 1234 ರಲ್ಲಿ ಮಲ್ಲಿಕಾರ್ಜುನ ದೇವಾಲಯದ ನಿರ್ಮಾಣವಾಗಿದೆ. ಹೊಯ್ಸಳ ಅರಸ ಎರಡನೇ ಅಥವಾ ಇಮ್ಮಡಿ ವೀರ ನರಸಿಂಹನ ಕಾಲಕ್ಕೆ ಸೇರಿದ ಈ ದೇವಾಲಯವನ್ನು ಇವನ ದಂಡನಾಯಕನಾದ ಹರಿಹರನಾಯಕನಿಂದ ನಿರ್ಮಿತವಾಗಿದೆ. ಇತಿಹಾಸದ ಪುರಾವೆಗಳ ಪ್ರಕಾರ ಹರಿಹರನು ಸೇವುಣರನ್ನು ಸೋಲಿಸಿದ ಸ್ಮರಣಾರ್ಥ ಬಸರಾಳುವಿನಲ್ಲಿ ಶಾಸನದೊಂದಿಗೆ ಈ ದೇವಾಲಯದ ನಿರ್ಮಾಣವಾಗಿರುವುದನ್ನು ಗಮನಿಸಬಹುದು.

**ಬಸರಾಳು ಶಾಸನದ ವಿವರಣೆ**

1. ಆ ಪ್ರತಾಪಚಕ್ರವರ್ತಿ ಹೊಯ್ಸಳ ಶ್ರೀ ವೀರಸೋಮೇಶ್ವರದೇವರ್ಗ್ಗಂ ಬಿಜ್ಜಲದೇವಿಗಂ ಜನಿಸಿದ ಶ್ರೀ ವೀರನಾರಸಿಂ
2. ಹದೇವರಸರು ನಿಜರಾಜಧಾನಿ ದೋರಸಮುದ್ರದೊಳು ಶುಖಶಂಕಥಾವಿನೋದದಿಂ ಪ್ರಿಥ್ವೀರಾಜ್ಯಂಗೆಯ್ಯುತ್ತ ಮಿರ್ದ್ದಲ್ಲಿ ತತ್ಪಾ
3. ದಪದ್ಮೋಪಜೀವಿಯಪ್ಪ ಅಡ್ಡಾಯಿದದ ಹರಿಯಂಣನ ಮಕ್ಕಳು ಹರಿಯಣ್ಣ ನಾರಸಿಂಹದೇವಂಗಳಿಗೆ ಸಕವರ್ಷ 1191ನೆಯ
4. ಪ್ರಭವಸಂವತ್ಸರದ ವಯಿಶಾಖ ಬ 1 ಮಂ । ಆ ಬಸುರಿವಾಳ ಶ್ರೀ ಮಲ್ಲಿಕಾರ್ಜುನದೇವರಸ್ಥಾನಕ್ಕೆ ಆ ಹರಿಯಂಣನ ಮಕ್ಕಳುಗಳ್ ಸ್ಥಾ
5. ನಿಕರಾಗಿ ಧಾರೆಯಂ ಹಡದು ಬೆಳೆಯನಹಳ್ಳಿ ಗ 15 ತೆರಣಿ 1 ಬೇಬಿ ಗ 50 ಅಸ್ತು ಗ 65

ದೇವರ ಶ್ರೀಕಾರಿಯಕ್ಕೆ ಸಲ್ವುದು ಶ್ರೀ ಮಲಪರೋಳುಗಣ್ಣ

ಕ್ಷಯಾಸಂವತ್ಸರದ ಫಲ್ಗುನ ಬ 5 ಸಉಮ್ಯವಾರ ಕಲಿಯಬಯಿರರಸ ನಾಯಕನ ಮಗ ಕೆಂಬಯಿರಸನಾಯಕನು ಮಲ್ಲಕಾರ್ಜುನ ದೇವರಿಗೆ ಯೆಕಟ್ಟೆಯ ಕೆಳಗೆ ಮೊದಲೇರಿಯಲ್ಲಿ ಗದ್ದೆ ಸ 1 ಎಂಬ ಮಾಹಿತಿ ಇದೆ. ಈ ಮಾಹಿತಿ ಬಸರಾಳು ಶಾಸನದಲ್ಲಿನ 30ನೇ ಶಾಸನದ ಕೆಳಗೆ ಇರುವಂತ ಮಾಹಿತಿಯಾಗಿದೆ.[2]

ಕ್ರಿ.ಶ. 1234 ನೆಯ ವರ್ಷದ ಇಮ್ಮಡಿ ನರಸಿಂಹನ ಶಾಸನ ರಾಜನ ವಂಶಾವಳಿಯನ್ನು ಕೊಡುವುದಲ್ಲದೆ ಆತನಪ್ರಧಾನಿ ತೆನದಂಕವಂಶದ ಹರಿಹರದಂಡನಾಯಕನು ತನ್ನ ತಮ್ಮಂದಿರಾದ ಸಿಂಗೆಯನಾಯಕ ಮತ್ತು ಮಾರೆಯನಾಯಕರೊಡಗೂಡಿ ಮಲ್ಲಿಕಾರ್ಜುನ ದೇವಾಲಯವನ್ನು ಕಟ್ಟಿಸಿ ಕೆರೆಯನ್ನು ನಿರ್ಮಿಸಿ ರಾಜನಿಂದ ಭೂಮಿಯನ್ನು ಪಡೆದು ದತ್ತಿಯಾಗಿ ಬಿಟ್ಟಂತೆ 29 ಮತ್ತು 30 ರ ಒಂದು ಸಂಘಟಿತ ಶಾಸನ ವಿವರಣೆ ನೀಡುತ್ತದೆ.[3]

ಬಸರಾಳು ಶಾಸನದ ಮಾಹಿತಿಯಿಂದ ಈ ದೇವಾಲಯದ ನಿರ್ಮಾಣದ ಬಗ್ಗೆ ಸ್ಪಷ್ಟ ಮಾಹಿತಿಯನ್ನು ಇಲ್ಲಿ ಕಲೆ ಹಾಕಲಾಗಿದೆ. ತ್ರಿಕೂಟಚಲ ಶೈಲಿಯಲ್ಲಿರುವ ಮಲ್ಲಿಕಾರ್ಜುನ ದೇವಾಲಯ ಇದು ಶಿವನಿಗೆ ಅರ್ಪಿತವಾಗಿದೆ. ಈ ದೇವಾಲಯವು 3 ಅಡಿ ಎತ್ತರದ ಜಗತಿಯ ಮೇಲಿದೆ. ಪಶ್ಚಿಮ, ಉತ್ತರ ಮತ್ತು ದಕ್ಷಿಣಕ್ಕೆ ಮೂರು ಗರ್ಭಗೃಹಗಳು (ತ್ರಿಕೂಟ ರಚನೆಯಲ್ಲಿ), ಒಂದೊಂದು ಸುಖನಾಸಿ ಮತ್ತು ಒಂದು ನವರಂಗ ಇದೆ ಮತ್ತು ನಂದಿ ಮಂಟಪ, ಉತ್ತರ ಮತ್ತು ದಕ್ಷಿಣಕ್ಕೆ ಸೋಪಾನಗಳಿವೆ ಹಾಗೂ ಇಕ್ಕೆಲಗಳಲ್ಲಿ ಗರ್ಭ ಗುಡಿಗಳಿವೆ. ಇಲ್ಲಿನ ಸ್ವಾರಸ್ಯಕರ ಕೆತ್ತನೆಯ ಸಂಗತಿ ಎಂದರೆ ಭಾಗವತ ಕತೆಯ ಮಧ್ಯದಲ್ಲಿ ಪ್ರಹಲ್ಲಾದನ ಕಥೆಯ ಸನ್ನಿವೇಶಗಳ ಕೆತ್ತನೆಗಳಿರುವುದು ಇಲ್ಲಿನ ವಿಶೇಷ. ದೇವಾಲಯದ ಬಿತ್ತಿ ಶಿಲ್ಪಗಳು ದೇವಾಲಯದ ಅಂದವನ್ನು ಹೆಚ್ಚಿಸಿವೆ. ದೇವಾಲಯದ ಒಳಭಾಗದಲ್ಲಿ ಶಿವನ ಲಿಂಗ, ಸೂರ್ಯ, ನಾಗ ಮತ್ತು ನಾಗಿಣಿಯರ ವಿತ್ರಹಗಳಿವೆ. ಇಲ್ಲಿನ ಮತ್ತೊಂದು ವಿಶೇಷತೆಯೆಂದರೆ ನಾಗ ಮತ್ತು ನಾಗಿಣಿಯರ ಮೂರ್ತಿಯನ್ನು ಒಂದೇ ಕಲ್ಲಿನಲ್ಲಿ ಕೆತ್ತಿರುವುದು ಇದು ಹೆಚ್ಚು ಆಕರ್ಷಕವಾಗಿದೆ.

ದೇವಾಲಯದ ಹೊರ ಭಾಗದಲ್ಲಿ ಸುಮಾರು 103 ಸಂಕೀರ್ಣವಾದ ಕೆತ್ತನೆಯ ಚಿತ್ರ ಫಲಕಗಳು ದೇವಾಲಯವನ್ನು ಸುತ್ತುವರಿದಿವೆ. ಅಧಿಷ್ಠಾನದಲ್ಲಿ ಆರು ಪಟ್ಟಿಕೆಗಳಿವೆ. ಆನೆ, ಕುದುರೆ ಸವಾರಿ, ಸಿಂಹ, ರಾಮಾಯಣ ಮತ್ತು ಮಹಾಭಾರತ ಮತ್ತು ಭಾಗವತ ಪುರಾಣಗಳ ಕಥೆ, ಮಕರ ಮತ್ತು ಕೀರ್ತಿ ಮುಖ ಕೊನೆಯದಾಗಿ ಹಂಸದ ಸಾಲುಗಳು ದೇವಾಲಯದ ಅಂದವನ್ನು ಹೆಚ್ಚಿಸಿವೆ. ಸುತ್ತಲೂ ವಿವಿಧ ಭಂಗಿಯ ದೇವತಾ ಮೂರ್ತಿಗಳಿವೆ. ಈ ದೇವಸ್ಥಾನಕ್ಕೆ ಎರಡು ಸೂರು (EVAVES) ಗಳಿವೆ ಮತ್ತು ಸೂಕ್ಷ್ಮವಾಗಿ ಅಲಂಕೃತವಾಗಿರುವಂತಹ ಚಿಕ್ಕ ಚಿಕ್ಕ ಗೋಪುರ (Aedicule) ಗಳು ದೇವಾಲಯದ ಸುತ್ತಲೂ ಇವೆ. ಇವುಗಳು ಎರಡು ಸೂರುಗಳ ಮಧ್ಯದಲ್ಲಿರುವುದು ವಿಶೇಷ. ಮಧ್ಯದ ದೇಗುಲಕ್ಕೆ ಗೋಪುರವಿದೆ. ಗೋಪುರದ ಮೇಲಿನ ಸುಖನಾಸಿಯ ಭಾಗದಲ್ಲಿ ಹೊಯ್ಸಳರ ಲಾಂಛನ ಇರುವುದು ಆಕರ್ಷಕವಾಗಿದೆ.

ಮುಖ್ಯ ದ್ವಾರದಲ್ಲಿ ನಮ್ಮನ್ನು ಆಕರ್ಷಿಸಲು ಮತ್ತು ಆಹ್ವಾನಿಸುವಂತೆ ಎರಡು ಪುಟ್ಟ ಗುಡಿಗಳು ಮಟ್ಟಿಲಿನ ಎಡ ಮತ್ತು ಬಲ ಭಾಗಗಳಲ್ಲಿವೆ ಆದರೆ ಗುಡಿಯೊಳಗೆ ಯಾವುದೇ ಮೂರ್ತಿಶಿಲ್ಪಗಳು ಕಂಡುಬರುವುದಿಲ್ಲ ಹಾಗೇ ಇದರ ವಿರುದ್ಧ ದಿಕ್ಕಿನಲ್ಲಿಯೂ ಸಹ ಎರಡು ಪುಟ್ಟ ಗುಡಿಗಳಿವೆ

---

[2] ಎಪಿಗ್ರಾಫಿಯ ಕರ್ನಾಟಕ. ಸಂಪುಟ–7, ಮಂಡ್ಯಜಿಲ್ಲೆ (ನಾಗಮಂಗಲ, ಮಂಡ್ಯ, ಮದ್ದೂರು, ಮಳವಳ್ಳಿ). ಕನ್ನಡ ಅಧ್ಯಯನ ಸಂಸ್ಥೆ ಮೈಸೂರು, 1979. ಪು.216.

[3] ಅದೇ. ಪು.1

ಇವುಗಳಲ್ಲೂ ಯಾವುದೇ ಮೂರ್ತಿಗಳು ಇರುವುದಿಲ್ಲ. ದೇವಾಲಯದ ಸಭಾಂಗಣಕ್ಕೆ ಪ್ರವೇಶಿಸಲು ಎರಡೂ ಬದಿಗಳಲ್ಲಿ ಪ್ರವೇಶ ದ್ವಾರಗಳಿವೆ. ಈ ಎರಡೂ ಪ್ರವೇಶ ದ್ವಾರಗಳಲ್ಲಿ ನಿಂತಿರುವ ಆನೆಗಳ ಕೆತ್ತನೆಯಿದೆ.

ದೇವಾಲಯದ ಹೊರಾಂಗಣದಲ್ಲಿರುವ ಶಿಲ್ಪಗಳಲ್ಲಿ ಹೆಚ್ಚು ಆಕರ್ಷಣೆ ಎಂದರೆ 16 ಕೈಗಳುಳ್ಳ ಶಿವ ಅಂದಕಾಸುರನ ತಲೆಯ ಮೇಲೆ ನೃತ್ಯ ಮಾಡುತ್ತಿರುವುದು ಹಾಗೂ 22 ಶಸ್ತ್ರಸಜ್ಜಿತವಾಗಿರುವ ದುರ್ಗಾ ಮತ್ತು ಸರಸ್ವತಿಯರು ನೃತ್ಯ ಮಾಡುತ್ತಿರುವ ಚಿತ್ರಗಳು. ರಾವಣನು ಕೈಲಾಸ ಪರ್ವತವನ್ನು ಎತ್ತಿ ಹಿಡಿದಿರುವುದು. ಅರ್ಜುನನು ಮತ್ಸ್ಯಕ್ಕೆ ಗುರಿ ಇಟ್ಟಿರುವುದು, ದ್ರೌಪದಿಯು ಹಾರವನ್ನು ಹಿಡಿದಿರುವುದು ಮತ್ತು ಗಜಾಸುರನನ್ನು ವಧಿಸುತ್ತಿರುವ ರಾಕ್ಷಸನ ಚಿತ್ರಗಳು ಆಕರ್ಷಿಸುತ್ತವೆ. ಈ ದೇವಾಲಯವು ಶಿವನ ಮತ್ತೊಂದು ಹೆಸರಾದ ಮಲ್ಲಿಕಾರ್ಜುನನಿಗೆ ಅರ್ಪಿತವಾಗಿದೆ ಎಂಬುದನ್ನು ಮತ್ತೆ ಮತ್ತೆ ನೆನಪಿಸುವಂತಿದೆ.

ಸುತ್ತಲೂ ಲತೆ, ಬಳ್ಳಿಗಳು, ಕೀರ್ತಿಮುಖ, ಯಕ್ಷ–ಯಕ್ಷಿಣಿಯರ ಶಿಲ್ಪಿಗಳಿವೆ. ನಟರಾಜ, ಶಿವ, ಪಾರ್ವತಿಯರ ಶಿಲ್ಪಗಳು, ಗಣೇಶ, ಮಹಿಶಾಸುರಮರ್ಧಿನಿ, ಸುಖನಾಸಿನಿಯ ಮುಂದೆ ಕೀರ್ತಿ ಮುಖ ತೋರಣದಡಿಯಲ್ಲಿ ಶಿವ ತಾಂಡವ ಶಿಲ್ಪವಿದೆ. ದೇವಾಲಯದ ಸುತ್ತಲೂ ರಕ್ಷಣೆ ಮತ್ತು ಸೌಂದರ್ಯಕ್ಕೆ ಮೆರಗು ಎಂಬಂತೆ ವಿಘ್ನನಿವಾರಕ ಮಹಾಗಣಪತಿ, ಸರಸ್ವತಿ, ನಟರಾಜ, ಅಷ್ಟಭುಜ ವಿಷ್ಣು, ಲಕ್ಷ್ಮಿ, ಯೋಗ ನಾರಾಯಣ ಮುಂತಾದ ಮೂರ್ತಿಗಳು ಇಲ್ಲಿ ನೆಲೆಸಿದ್ದಾರೆ. ನವರಂಗದ ಮಂಟಪಕ್ಕೆ ಹೊಂದಿಕೊಂಡಿರುವ ಕಂಬಗಳು ಅತಿ ಎತ್ತರವಿರದೆ ಚಿಕ್ಕದಾಗಿದ್ದು ಸಹ ಬಹಳ ಸುಂದರವಾಗಿವೆ. ಕಮಲದ ಹೂವಿನ ಕೆತ್ತನೆಯೂ ದ್ವಾರದ ಲಲಾಟದಲ್ಲಿ ಆಕರ್ಷಕವಾಗಿದೆ. ದೇವಾಲಯದ ಎರಡೂ ದ್ವಾರಗಳಲ್ಲಿಯೂ ಈ ಕಮಲದ ಹೂವಿನ ಕೆತ್ತನೆಯನ್ನು ಕಾಣಬಹುದು. ದೇವಾಲಯದಲ್ಲಿರುವ ಜಾಲಾಂಧ್ರದಲ್ಲಿ ಸೂರ್ಯನ ಕಿರಣಗಳು ದೇವತಾ ಮೂರ್ತಿಗೆ ನೇರವಾಗಿ ಬೀಳಲು ಅನುಕೂಲಕರವಾಗಿದೆ ಇಲ್ಲಿನ ಮತ್ತೊಂದು ವಿಶೇಷತೆಯೆಂದರೆ ಸೂರ್ಯನ ರಶ್ಮಿಗಳು ಯುಗಾದಿ ಹಬ್ಬದ ದಿನದಂದು ಮಾತ್ರ ಈ ಜಾಲಾಂಧ್ರದ ಮೂಲಕ ನೇರವಾಗಿ ಹಾದು ಹೋಗಿ ಮಲ್ಲಿಕಾರ್ಜುನ ಸ್ವಾಮಿಯ ಮೇಲೆ ಬೀಳುತ್ತವೆ.

ತ್ರಿಕೂಟ ಎಂಬುದು ಮಲ್ಲಿಕಾರ್ಜುನ, ಸೂರ್ಯ ಮತ್ತು ನಾಗ ದೇವರಿಗೆ ಅರ್ಪಿತವಾಗಿದ್ದು ಈ ತ್ರಿಮೂರ್ತಿಗಳಿಗೆ ಕೂಟಗಳಿರುವುದರಿಂದಲೇ ತ್ರಿಕೂಟಚಲ ದೇವಾಲಯ ಎಂಬ ನಾಮಾಂಕಿತ ಪ್ರಾಪ್ತವಾಗಿರುವುದು.

ದೇವಾಲಯದ ಮುಖ್ಯ ಪ್ರವೇಶ ದ್ವಾರದ ಬಲ ಭಾಗದಲ್ಲಿ ಬೃಹತ್ ಆಕಾರದ ಬಸರಾಳು ಶಾಸನ ಮತ್ತು ಎಡ ಭಾಗದಲ್ಲಿ ಗಣೇಶನ ವಿಗ್ರಹವಿದೆ ಮತ್ತು ಇದೇ ಮಂಟಪಕ್ಕೆ ಹೊಂದಿಕೊಂಡಂತಿರುವ ಛಾವಣಿಯ ಮೇಲೆ ನವಗ್ರಹಗಳ ಕೆತ್ತನೆ ಇದೆ. ದೇವಾಲಯದ ಹಿಂದಿನ ಪಾರ್ಶ್ವದಲ್ಲಿ ಪೂಜೆಗೆ ಅನುಕೂಲವಾಗಲೆಂಬಂತೆ ಬಾವಿ ಮತ್ತು ಚಂಡಿಕೇಶ್ವರನ ಗುಡಿ ಇದೆ. ಮುಂದೆ ಬಂದರೆ ನಾಗರಕಲ್ಲುಗಳು ಕಾಣಿಸುತ್ತವೆ. ದೇವಾಲಯದ ಪೂರ್ವದಲ್ಲಿ 16 ಅಡಿ ಎತ್ತರದ ಕಂಬವಿದ್ದು ಅದರ ಮೇಲೆ ಗಂಡು ಮತ್ತು ಹೆಣ್ಣಿನ ಚಿತ್ರ ಶಲ್ಪಗಳಿದ್ದು ಪ್ರಸ್ತುತ ಹೆಣ್ಣಿನ ಶಿಲ್ಪ ಮೂರ್ತಿ ಮಾತ್ರ ಇದೆ. ಈ ರೀತಿಯ ಕಂಬವನ್ನು ನಾವು ಹಳೆಬೀಡಿನ ಹೊಯ್ಸಳೇಶ್ವರ ದೇವಸ್ಥಾನದ ಹೋಲಿಕೆಯನ್ನು ನಿರೂಪಿಸಬಹುದು.

ದೇವಾಲಯದ ಮುಖ್ಯ ದ್ವಾರದಿಂದ ನೋಡಿದರೆ ಕೇವಲ ಸಾಮಾನ್ಯ ದೇವಾಲಯದಂತೆ ಕಾಣುವ ಈ ದೇವಾಲಯ ಒಳ ಹೋಗುತ್ತಿದ್ದಂತೆ ಹೊಯ್ಸಳ ಶೈಲಿ ಮತ್ತು ಕಲಾಕಾರರ ಸೂಕ್ಷ್ಮ ಕೆತ್ತನೆಯನ್ನು ಅನಾವರಣಗೊಳಿಸಿ ನೋಡುಗರನ್ನು ನಿಬ್ಬೆರುಗುಗೊಳಿಸುತ್ತದೆ. ಈ ಸ್ಥಳವನ್ನು ಸಂರಕ್ಷಿತ ಸ್ಮಾರಕ ಎಂದು ಗುರುತಿಸಿ ಭಾರತೀಯ ಪುರಾತತ್ವ

ಸರ್ವೇಕ್ಷಣ ಸಂಸ್ಥೆಯು ಇದರ ರಕ್ಷಣೆ ಮಾಡುತ್ತಿದೆ. ಬೇಸರದ ಸಂಗತಿ ಎಂದರೆ ಇಲ್ಲಿನ ಬಸರಾಳು ಶಾಸನವನ್ನು ಹಿಂದೆ ರಕ್ಷಣೆ ಮಾಡದೇ ಅದರ ಮೇಲೆ ಕಲ್ಲಿನಿಂದ ಕೆತ್ತನೆ ಮಾಡಿ ಶಾಸನದ ಮುಖ್ಯ ಅಂಶಗಳು ಮಾಸಿವೆ ಮತ್ತು ಆ ಶಾಸನವನ್ನು ಅವಶ್ಯಕವಾಗಿ ಸುರಕ್ಷೆ ಮಾಡಬೇಕಾದ ಅನಿವಾರ್ಯತೆ ಇದೆ. ಇನ್ನು ಈ ದೇವಾಲಯದ ಬಗ್ಗೆ ಪ್ರಚಾರದ ಕೊರತೆ ಇರುವುದರಿಂದ ನಾಡಿನ ಅದೆಷ್ಟೊ ಜನರಿಗೆ ಇಂತಹದೊಂದು ಅದ್ಭುತ ದೇವಾಲಯ ಇರುವುದೇ ತಿಳಿಯದಿರುವುದು ನೋವಿನ ಸಂಗತಿ.

ಮುಂದಿನ ದಿನಗಳಲ್ಲಿ ಈ ದೇವಾಲಯಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಬರುವಂತಾಗಲಿ ಹಾಗೂ ನಮ್ಮ ನಾಡಿನ ಸಾಂಸ್ಕೃತಿಕ ಪರಂಪರೆ ಇಂದಿನ ಹಾಗೂ ಮುಂದಿನ ಜನಾಂಗಕ್ಕೂ ಉಳಿಸಿ ಸಂರಕ್ಷಣೆ ಮಾಡುವಲ್ಲಿ ಸರ್ಕಾರದ ಜೊತೆಗೆ ನಾವು ಸಹ ಕೈಜೋಡಿಸುವಂತಾಗಲಿ ಎಂಬುದೇ ನನ್ನ ಈ ಲೇಖನದ ಆಶಯವಾಗಿದೆ.

ಒಟ್ಟಾರೆಯಾಗಿ ಹೇಳುವುದಾದರೆ ನಮ್ಮ ನಾಡಿನಲ್ಲಿರುವ ಪ್ರತಿಯೊಂದು ದೇವಾಲಯದ ವಿಶೇಷತೆಗಳು ಸದಾ ಕಾಲ ನಮ್ಮೆಲ್ಲರನ್ನು ಆಕರ್ಷಿಸುವಂತೆ ಮಲ್ಲಿಕಾರ್ಜುನ ಸ್ವಾಮಿ ದೇವಾಲಯದ ಭೇಟಿಯೂ ಸಾರ್ಥಕತೆಯ ಭಾವವನ್ನು ಮೂಡಿಸುವಲ್ಲಿ ಸಫಲವಾಗಿದೆ ಎಂದು ಹೇಳುವುದಾದರೆ ಇದರ ಕೊಡುಗೆಯ ವ್ಯಾಪಕತೆ ವಿಸ್ತಾರವಾಗುತ್ತಾ ಹೋಗುತ್ತದೆ ಎಂದೇ ಹೇಳಬಹುದು ಅಂತಿಮವಾಗಿ ನಮ್ಮ ಈ ದೇವಾಲಯದ ಭೇಟಿಯೂ ಹೊಯ್ಸಳರ ಕಲಾ ಪ್ರೌಢಿಮೆಗೆ ಜೀವಂತ ಸಾಕ್ಷಿಗೆ ಇರುವ ದೇವಾಲಯಗಳ ಸಾಲಿನಲ್ಲಿ ಇದೂ ಒಂದಾಗಿ ನಿಲ್ಲುತ್ತದೆ ಎಂದರೆ ತಪ್ಪಾಗಲಾರದು.

**ಆಕರ ಗ್ರಂಥಗಳು**


- *ಎಪಿಗ್ರಾಫಿಯ ಕರ್ನಾಟಿಕ.* (1979). ಕನ್ನಡ ಅಧ್ಯಯನ ಸಂಸ್ಥೆ. ಮೈಸೂರು ವಿಶ್ವವಿದ್ಯಾನಿಲಯ.
- ಗೆರಾರ್ಡ್ ಫೊಬೆಕೆಮ್. (1996). ಆ ಕಂಪ್ಲೀಟ್ ಗೈಡ್ ಟು ಹೊಯ್ಸಳ ಟೆಂಪಲ್ಸ್. ಅಭಿನವ್ ಪಬ್ಲಿಕೇಷನ್ಸ್.
- *ಕನ್ನಡ ವಿಷಯ ವಿಶ್ವಕೋಶ.* (2009). ಇತಿಹಾಸ ಮತ್ತು ಪುರಾತತ್ವ.
- *ಕರ್ನಾಟಕ ಕೈಪಿಡಿ.* (2011). ಕರ್ನಾಟಕ ಗ್ಯಾಸೆಟಿಯರ್ ಇಲಾಖೆ.
- ಶ್ರೀಕಂಠ ಶಾಸ್ತ್ರೀ, ಎಸ್. (1965). *ಹೊಯ್ಸಳ ವಾಸ್ತು ಶಿಲ್ಪ.* ಪರಿಶ್ರೀ ಪ್ರಿಂಟರ್ಸ್.


**ವಕ್ತೃಗಳ ವಿವರ**

- ನಾರಾಯಣಪ್ಪ, ವಯಸ್ಸು 63, ಬಸರಾಳು.
- ಕುಮಾರ, ವಯಸ್ಸು 42, ದೇವಾಲಯದ ಮೇಲ್ವಿಚಾರಕರು.
- ಮಂಜುನಾಥ್, ವಯಸ್ಸು 52, ಪ್ರವಾಸಿಗರು, ಬೆಂಗಳೂರು.
- ನಾಗರತ್ನಮ್ಮ ಎಸ್, ವಯಸ್ಸು 51, ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಬೆಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
- ಕ್ಷೇತ್ರ ಕಾರ್ಯ ಮತ್ತು ಸಂದರ್ಶನ, ಬಸರಾಳು ಗ್ರಾಮ, ದಿನಾಂಕ ಡಿಸೆಂಬರ್ 24, 2022

**ಅನುಬಂಧ – 1**
**ಛಾಯಾಚಿತ್ರಗಳು**



**ದೇವಾಲಯದ ಮುಖ್ಯ ಪ್ರವೇಶದ್ವಾರ**



ಎಡಭಾಗದಲ್ಲಿರುವ ಬಸರಾಳು ಶಾಸನ



ಮೇಲ್ಭಾಗದಲ್ಲಿರುವ ನವಗ್ರಹಗಳ ಕೆತ್ತನೆ



ದ್ವಾರದ ಬಲಭಾಗದಲ್ಲಿನ ಗಣೇಶನ ಗುಡಿ



ದೇವಾಲಯದ ಸ್ವಾಗತ ಗೋಪುರಗಳು



ಸುತ್ತಲೂ ಇರುವ ಆರು ಸಾಲಿನ ಪಟ್ಟಿಕೆಗಳು



ಸಂಪೂರ್ಣವಾದ ದೇವಾಲಯ ಮತ್ತು ಹೊಯ್ಸಳ ಲಾಂಛನವಿರುವ ದೃಶ್ಯ.



ದೇವಾಲಯದ ಪಾರ್ಶ್ವ ನೋಟದೊಂದಿಗೆ ಧನ್ಯವಾದಗಳು



ದೇವಾಲಯದ ಒಳಗಿರುವ ಬಾವಿ



ಸ್ತಂಭದ ಮೇಲಿರುವ ಸ್ತ್ರೀಯ ಮೂರ್ತಿಶಿಲ್ಪ